ಇ) *ಚಾಮರಾಜನಗರದಲ್ಲಿ ವಿದ್ಯುಚ್ಛಕ್ತಿ ಸರಬರಾಜನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ. ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಚಾಮರಾಜನಗರದಲ್ಲಿ ವಿದ್ಯುಚ್ಛಕ್ತಿಯ ಕೊರತೆಯಿದ್ದರೂ, ಕುಡಿಯುವ ನೀರಿನ ಸ್ಥಾವರಗಳಿಗೆ ಆದ್ಯತೆಯ ಮೇರೆಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುತ್ತಿದೆ. ಮತ್ತು ಕುಡಿಯುವ ನೀರಿನ ಸರಬರಾಜಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ.

ಇ) ಮತ್ತು ಈ) ದೊಡ್ಡರಾಯ ಪೇಟೆಯಲ್ಲಿರುವ 66 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದಲ್ಲಿ ಹಾಗೂ ಕಡಕೊಳ 220 ಕೆ.ವಿ. ಸ್ಟೇಷನ್‌ನಿಂದ ದೊಡ್ಡರಾಯಪೇಟೆಗೆ ಬರುವ 66 ಕೆ.ವಿ. ಪ್ರಸರಣಾ ಮಾರ್ಗ (ಸಿಂಗಲ್ ಸರ್ಕ್ಯೂಟ್ ಲೈನ್) ದಲ್ಲಿರುವ ಅಧಿಕ ಒತ್ತಡವು ಚಾಮರಾಜನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಗೆ ಕಾರಣವಾಗಿದೆ. ಈ ಸಮಸ್ಯೆಯನ್ನು ನಿವಾರಿಸಲು ಮಂಡಳಿಯು ಚಾಮರಾಜನಗರದಲ್ಲಿ ಒಂದು 220 ಕೆ.ವಿ ಸ್ಟೇಷನ್‌ನನ್ನು ನಿರ್ಮಿಸಲು ಉದ್ದೇಶಿಸಿದೆ. ಸಧ್ಯಕ್ಕೆ ಕಡಕೊಳದಿಂದ ಚಾಮರಾಜನಗರಕ್ಕೆ 220 ಕೆ.ವಿ ವಿದ್ಯುತ್ ಮಾರ್ಗವನ್ನು ನಿರ್ಮಿಸಿ ಅದರ ಮೂಲಕ 66ಕೆ.ಮಿ ಸರಬರಾಜನ್ನು ಪಡೆಯಲು ಉದ್ದೇಶಿಸಲಾಗಿದೆ. ಚಾಮರಾಜನಗರದಲ್ಲಿ 220 ಕೆ.ವಿ ವಿದ್ಯುತ್ ಕೇಂದ್ರ ಸ್ಥಾಪನೆ ಹಾಗೂ ಕಡಕೊಳದಿಂದ ಚಾಮರಾಜನಗರಕ್ಕೆ 220 ಕೆ.ವಿ ಮಾರ್ಗ ನಿರ್ಮಾಣಕ್ಕೆ ಅಗತ್ಯವಿರುವ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ. ಚಾಮರಾಜನಗರ ಹೊರವಲಯದ ಗಾಳಿಪುರದಲ್ಲಿರುವ ಸರ್ಕಾರಿ ಭೂಮಿಯಲಿ ಕನಿಷ್ಠ 70 ಎಕರೆ ಭೂಮಿಯನ್ನು ಆದಷ್ಟು ಜಾಗ್ರತೆ ಮಂಡಳಿಯ ವಶಕ್ಕೆ ಕೊಡಬೇಕೆಂದು ಚಾಮರಾಜನಗರ ಜಿಲ್ಲಾಧಿಕಾರಿಯವರಿಗೆ ಪತ್ರವನ್ನು ಬರೆಯಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನಕ್ಕಾಗಿ ಸಲ್ಲಿಸಿರುವ ಅರ್ಜಿಗಳ ಕುರಿತು

1853 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಚಿವರು. ಈ ಕೆಳಕಂಡ ಪಶ್ನೆಗಳಿಗೆ ದಯವಿಟ್ಟು ಉತ್ತಗಿಸುವರೇ?

ಅ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನಕ್ಕಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು?*

ಆ) *ನಿವೇಶನಕ್ಕಾಗಿ ಕಟ್ಟಿರುವ ಠೇವಣಿಯ ಮೊಬಲಗು ಎಷ್ಟು?*

ಇ) *ಇವರುಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರ ತೀರ್ಮಾನಿಸಲಾಗಿದೆಯೇ?*

ಈ) *ಈಗ ಹಂಚಿಕೆ ಮಾಡುವುದಕ್ಕೆ ಸಿದ್ಧವಿರುವ ನಿವೇಶನಗಳ ಸಂಖ್ಯೆ ಎಷ್ಟು?*

ಉ) *ಹೊಸದಾಗಿ ಬಡಾವಣೆಗಳನ್ನು ಹಂಚಿಕೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?*

ಶ್ರೀ. ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಅಕ್ಟೋಬರ್ 1988ರಲ್ಲಿ 3200 ನಿವೇಶನಗಳನ್ನು ಸಾರ್ವಜನಿಕರಿಗಾಗಿ ಹಂಚಿಕೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಧಿಸೂಚಿಸಿತ್ತು. ಈ ಅಧಿಸೂಚನೆಗನುಗುಣವಾಗಿ ಹಂಚಿಕೆ ಕಾರ್ಯವು ಇತ್ತೀಚೆಗೆ ಪೂರ್ಣಗೊಂಡಿರುತ್ತದೆ. ಹಾಗೂ ಆ ಯಶಸ್ವಿ ಅರ್ಜಿದಾರರಿಗೆ ಆರಂಭಿಕ ಠೇವಣಿ ಹಣವನ್ನು ಹಿಂದಿರುಗಿಸಲಾಗುತ್ತಿದೆ. ಡಾ :ಬಿ.ಆರ್. ಅಂಬೇಡ್ಕರ್‌ರವರ ಜನ್ಮಶತಾಬ್ದಿ ಅಂಗವಾಗಿ ಡಿಸೆಂಬರ್ 1988ರಲ್ಲಿ 2000 ನಿವೇಶನ ಗಳನ್ನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಹಂಚಿಕೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಧಿಸೂಚಿಸಿದ್ದು. ಈಅಧಿಸೂಚನೆಗನುಗುಣವಾಗಿ ಸುಮಾರು 5000 ಅರ್ಜಿಗಳು ಬಂದಿರುತ್ತವೆ. ನಿವೇಶನಗಳು ಲಭ್ಯವಿಲ್ಲದ ಕಾರಣ, ಈ ಅಧಿಸೂಚನೆಗೆದುರಾಗಿ ಹಂಚಿಕೆ ಮಾಡಲಾಗಿರುವುದಿಲ್ಲ. ಪ್ರಸಕ್ತ ವರ್ಷದಲ್ಲಿ ಅರ್ಹತೆಪಟ್ಟಿಯನ್ನು ಇತ್ಯರ್ಥಗೊಳಿಸಿದ ನಂತರ ಹಂಚಿಕೆ ಕಾರ್ಯವು ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಸದರಿ ಅಧಿಸೂಚನೆಯ ಮೇರೆಗೆ ರೂ. 18.55 ಲಕ್ಷಗಳನ್ನು ಪ್ರಾರಂಭಿಕ ಠೇವಣಿಯಾಗಿ ಸ್ವೀಕರಿಸಲಾಗಿದೆ, ಹಂಚಿಕೆಯ ಕಾರ್ಯವು ಇನ್ನೂ ಇತ್ಯರ್ಥವಾಗದ ಕಾರಣ ಪ್ರಾರಂಭಿಕ ಠೇವಣಿ ಹಣವನ್ನು ಹಿಂತಿರುಗಿಸಿರುವುದಿಲ್ಲ.

ಈ) 30 x 40 ಅಡಿ ಅಳತೆಯ 1300 ನಿವೇಶನಗಳು ಈಗ ಹಂಚಿಕೆಗೆ ಲಭ್ಯವಿರುತ್ತವೆ.

ಉ) ಶ್ರೀಗಂಧದ ಕಾವಲ್, ಸಜ್ಜೇಪಾಳ್ಯ ಹಾಗೂ ಹೊಸೂರು ಸರ್ಜಾಪುರ ರಸ್ತೆ 2ನೇ ಹಂತ ಬಡಾವಣೆಗಳಿಗಾಗಿ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರಿ ಆದೇಶ ಸಂ : ನಅಇ 716 ಎಂಎನ್‌ಎಸ್ 94 ದಿ : 18-5-96ರಲ್ಲಿ ನೀಡಿ ಭೂ ಸ್ವಾಧೀನ ಪಡಿಸಿಕೊಳ್ಳಲು ಅಂತಿಮ ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ. ಈ ಬಗ್ಗೆ ಮುಂದಿನ ಕ್ರಮಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೈಗೊಳುತ್ತಿದೆ.

VARAHI HYDRO ELECTIC PROJECT

1855 - B.S. Yadiyurappa (Shikaripura) : Will the Hon'ble Minister of state for Energy be pleased to state?

a) *How many Hydel projects are there in the state? Amount of power generated in each plant?*

b) *Among the above how many Generating Units are not in working condition, how many are working and what action has been taken to repair the non-working units?*

c) *Reasons for frequent power, failure in Varahi Hydro Electric Project, action taken to rectify the same.*